## ಶ್ರೀ ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು, ಮೈಸೂರು

# ಬೆಳದಿಂಗಳ ಸಂಗೀತ 270

**19 ಆಗಸ್ಟ್ 2024 * ಸೋಮವಾರ * ಸಂಜೆ 6.00**

ದಿವ್ಯ ಸಾನ್ನಿಧ್ಯ

**ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಶ್ರೀ ಸುತ್ತೂರು ಕ್ಷೇತ್ರ

## ವಾದ್ಯ ಸಂಗೀತ



**ಕೊಳಲು**

ವಿದ್ವಾನ್ ಅಮಿತ್ ಎ. ನಾಡಿಗ್



**ಮೃದಂಗ**

ವಿದ್ವಾನ್ ಬಿ.ಸಿ. ಮಂಜುನಾಥ್



**ಖಂಜರ**

ವಿದ್ವಾನ್ ಜಿ. ಗುರುಪ್ರಸನ್ನ



**ಕೊನ್ನಕ್ಕೋಲ್**

ವಿದ್ವಾನ್ ಬಿ.ಆರ್. ಸೋಮಶೇಖರ್ ಜೋಯಿಸ್

**ಸರ್ವರಿಗೂ ಹಾರ್ದಿಕ ಸುಸ್ವಾಗತ**

ವಿದ್ವಾನ್ ಅಮಿತ್ ಎ. ನಾಡಿಗ್ (ಕೊಳಲು), ವಿದ್ವಾನ್ ಬಿಸಿ. ಮಂಜುನಾಥ್ (ಮೃದಂಗ), ವಿದ್ವಾನ್ ಗುರುಪ್ರಸನ್ನ (ಖಂಜರ), ಮತ್ತು ವಿದ್ವಾನ್ ಬಿ.ಆರ್. ಸೋಮಶೇಖರ್ ಜೋಯಿಸ್ (ಕೊನ್ನಕ್ಕೋಲ್) ಈ ನಾಲ್ವರು ಸಮಾನಮನಸ್ಕ ವಿದ್ವಾಂಸರು ಸೇರಿ ನಿರ್ಮಿಸಿರುವ "ಬ್ರಹ್ಮ" ತಂಡವು ನೀಡಲಿರುವ "ವಾದ್ಯ ಸಂಗೀತ" ಕಾರ್ಯಕ್ರಮವು ಹೊಸ ರೀತಿಯ ನೋಟವುಳ್ಳದ್ದು. ಇವರೆಲ್ಲರೂ ಅವರವರ ಕ್ಷೇತ್ರಗಳಲ್ಲಿ ಈಗಾಗಲೇ ಅಪಾರ ಸಾಧನೆ ಮಾಡಿರುವ ಪ್ರತಿಭಾವಂತರು. ಅವರ ಈ ಸಮ್ಮಿಲನದಲ್ಲಿ ವೈಯಕ್ತಿಕ ಪ್ರತಿಭೆಗಳು ಎರಕಗೊಂಡು ಹೊಸದೊಂದು ನಾದ ಪ್ರಪಂಚ ನಿರ್ಮಾಣವಾಗುವ ಅಚ್ಚರಿಯನ್ನು ಶ್ರೋತೃಗಳು ಪಡೆಯಬಹುದು.

**ವಿದ್ವಾನ್ ಅಮಿತ್ ಎ. ನಾಡಿಗ್‌ರವರು** ಸಂಗೀತದ ಕೌಟುಂಬಿಕ ಹಿನ್ನೆಲೆಯಿಂದ ಬಂದಿರುವ ಪ್ರತಿಭಾವಂತ ಕಲಾವಿದರು. ಅಗ್ರಗಣ್ಯ ಪಿಟೀಲು ವಾದಕರಲ್ಲೊಬ್ಬರು. ಪ್ರಾರಂಭಿಕ ಸಂಗೀತ ಶಿಕ್ಷಣವನ್ನು ವಿದ್ವಾನ್ ಬಿ.ಕೆ. ಅನಂತರಾಮ್‌ರವರ ಬಳಿ ಪಡೆದು ಕಳೆದ ಎರಡು ದಶಕಗಳಿಂದ ಸಂಗೀತಕಲಾನಿಧಿ ಡಾ. ಆರ್.ಕೆ. ಶ್ರೀಕಂಠನ್‌ರವರ ಬಳಿ ಪಿಟೀಲು ಗಾಯನದ ಶೈಲಿಯನ್ನು ಕಲಿತಿದ್ದಾರೆ. ಚಿಕ್ಕ ವಯಸ್ಸಿನಲ್ಲಿಯೇ ಆಕಾಶವಾಣಿಯ “ಎ” ಶ್ರೇಣಿ ಕಲಾವಿದರಾಗಿರುವುದು ವಿಶೇಷ. ಅಮೆರಿಕ, ಜರ್ಮನಿ, ಸ್ವಿಜರ್‌ಲ್ಯಾಂಡ್, ಇಟಲಿ, ಫ್ರಾನ್ಸ್ ಮುಂತಾದ ದೇಶಗಳಲ್ಲಿ ಮತ್ತು ಭಾರತದ ಪ್ರತಿಷ್ಠಿತ ಸಂಗೀತವೇದಿಕೆಗಳಲ್ಲಿ ವಾದನವನ್ನು ಪ್ರಸ್ತುತಿ ಪಡಿಸಿರುವರು. ಕರ್ನಾಟಕ, ಹಿಂದೂಸ್ತಾನಿ, ಜಾಸ್, ಫ್ಯೂಷನ್ ಯಾವುದೇ ಸಂಗೀತಶೈಲಿಗೆ ಹೊಂದಿಕೊಳ್ಳಬಲ್ಲ ಅಸಾಧಾರಣ ಕಲಾನೈಪುಣ್ಯ ಉಳ್ಳವರು. ಕೇಂದ್ರ ಸರ್ಕಾರದ ಉಸ್ತಾದ್ ಬಿಸ್ಮಿಲ್ಲಾ ಖಾನ್ ಯುವ ಪುರಸ್ಕಾರ್, ಅನನ್ಯ ಯುವ ಪುರಸ್ಕಾರ, ರಾಮಲಲಿತ ಕಲಾಮಂದಿರದ ವಾರ್ಷಿಕ ಯುವ ಪ್ರತಿಭಾ ಪುರಸ್ಕಾರ – ಇವು ಅಮಿತ್‌ರವರ ಪ್ರತಿಭೆಗೆ ಒಲಿದುಬಂದಿರುವ ಪ್ರಶಸ್ತಿಗಳು. ಎಚ್.ಆರ್. ಬಿಗ್ ಬ್ಯಾಂಡ್‌ನ ಆಹ್ವಾನದ ಮೇಲೆ ಜರ್ಮನ್ ಜಾಜ್ ಉತ್ಸವದಲ್ಲಿ ಭಾಗವಹಿಸಿದ್ದು ಅವಿಸ್ಮರಣೀಯ ಸಂಗತಿ. ಶ್ರೀ ಅಮಿತ್‌ರವರು ನೆಟ್‌ಸರ್ವ್ ಟೆಕ್ನಾಲಜೀಸ್ ಸಂಸ್ಥೆಯ ಭಾರತ ಕಚೇರಿಯಲ್ಲಿ ಕ್ಯುಎ ಡೆಲಿವೆರಿ ವಿಭಾಗದ ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

**ವಿದ್ವಾನ್ ಬಿ.ಸಿ. ಮಂಜುನಾಥ್‌ರವರು** ಪ್ರಖ್ಯಾತ ಮೃದಂಗ ವಾದಕರಾದ ಸಂಗೀತ ವಿದ್ಯಾನಿಧಿ ಡಾ. ಬಿ.ಕೆ. ಚಂದ್ರಮೌಳಿಯವರ ಸುಪುತ್ರರು. ಗಾನಕಲಾಭೂಷಣ ಕೆ.ಎನ್. ಕೃಷ್ಣಮೂರ್ತಿ ಮತ್ತು ಪದ್ಮಶ್ರೀ ಸಂಗೀತಕಲಾನಿಧಿ ಡಾ. ಟಿ.ಕೆ. ಮೂರ್ತಿಯವರ ಬಳಿ ಸಂಗೀತಾಭ್ಯಾಸ ಮಾಡಿದ್ದಾರೆ.

ಭಾರತೀಯ ಶಾಸ್ತ್ರೀಯ ಸಂಗೀತ, ವಿಶ್ವ ಸಂಗೀತ, ಜಾಸ್, ಸಮಕಾಲೀನ ನೃತ್ಯಗಳಲ್ಲಿ ಇವರಿಗೆ ಅಪಾರ ಪರಿಶ್ರಮವಿದೆ. ವಿವಿಧ ರೀತಿಯ ತಾಳಗಳ ಆವಿಷ್ಕಾರ ಮಾಡಿದ್ದಾರೆ. ವಿವಿಧ ಸಂಗೀತ ಪದ್ಧತಿಗಳ ಸುಪ್ರಸಿದ್ಧ ಕಲಾವಿದರೊಡನೆ ಸಂಗೀತ ಕಾರ್ಯಕ್ರಮ ನೀಡಿರುತ್ತಾರೆ. ಕೇಂದ್ರ ಸಂಗೀತ ನಾಟಕ ಅಕ್ಯಾಡೆಮಿಯ ಉಸ್ತಾದ್ ಬಿಸ್ಮಿಲ್ಲಾ ಖಾನ್ ಯುವ ಪುರಸ್ಕಾರ್, ಗಾನಕಲಾ ಶ್ರೀ ಪ್ರಶಸ್ತಿ, ಕಂಚಿ ಕಾಮಕೋಟಿ ಪೀಠದ ಆಸ್ಥಾನ ವಿದ್ವಾನ್ ಸಮ್ಮಾನ – ಇವರಿಗೆ ಲಭಿಸಿರುವ ಕೆಲವು ಪ್ರಮುಖ ಗೌರವಗಳು. ಆಕಾಶವಾಣಿ ಮತ್ತು ದೂರದರ್ಶನದ "ಎ" ಶ್ರೇಣಿ ಕಲಾವಿದರು.

**ವಿದ್ವಾನ್ ಜಿ. ಗುರುಪ್ರಸನ್ನರವರು** ದೇಶವಿದೇಶಗಳಲ್ಲಿ ಖಂಜರ ವಾದನದ ಮೂಲಕ ಖ್ಯಾತರಾದವರು. ಕರ್ನಾಟಕ, ಹಿಂದೂಸ್ತಾನಿ, ಜಾಸ್, ಸಮಕಾಲೀನ ಸಂಗೀತ – ಹೀಗೆ ಎಲ್ಲ ರೀತಿಯ ಸಂಗೀತಗಳಿಗೂ ಸ್ಪಂದಿಸಬಲ್ಲ ಸಮರ್ಥರು. ವಿದ್ವಾನ್ ಆರ್. ಸತ್ಯಕುಮಾರ್, ವಿದ್ವಾನ್ ಆನೂರು ಅನಂತಕೃಷ್ಣ ಶರ್ಮ ಮತ್ತು ವಿದ್ವಾನ್ ಸಿ.ಪಿ. ವ್ಯಾಸ ಗುರುವಿಠ್ಠಲ ಇವರುಗಳ ಗರಡಿಯಲ್ಲಿ ಬೆಳೆದಿರುವ ಅಪ್ಪಟ ದೇಸಿ ಪ್ರತಿಭೆ. ಸಂಗೀತ ನಾಟಕ ಅಕ್ಯಾಡೆಮಿಯ ಉಸ್ತಾದ್ ಬಿಸ್ಮಿಲ್ಲಾ ಖಾನ್ ಯುವ ಪುರಸ್ಕಾರ್, ಕಂಚಿ ಕಾಮಕೋಟಿ ಪೀಠದ ಆಸ್ಥಾನ ವಿದ್ವಾನ್, ಗಾನಕಲಾಶ್ರೀ ಪ್ರಶಸ್ತಿ – ಇವರಿಗೆ ಲಭಿಸಿರುವ ಕೆಲವು ಪ್ರತಿಷ್ಠಿತ ಪುರಸ್ಕಾರಗಳು. ಆಕಾಶವಾಣಿಯ "ಎ ಟಾಪ್" ಶ್ರೇಣಿ ಕಲಾವಿದರು. ಸಮತ್ವ ಫೌಂಡೇಷನ್ ಸಂಸ್ಥೆಯ ಸಹಸಂಸ್ಥಾಪಕರು. ಪ್ರತಿಷ್ಠಿತ ಬಿರ್ಲಾ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿಯ ಎಂ.ಟೆಕ್. ಪದವೀಧರರು.

**ವಿದ್ವಾನ್ ಬಿ.ಆರ್. ಸೋಮಶೇಖರ್ ಜೋಯಿಸ್‌ರವರು** ಕೊನ್ನಕ್ಕೋಲ್ ಅಪರೂಪದ ವಾದ್ಯವಿಶೇಷವನ್ನು ಕರಗತ ಮಾಡಿಕೊಂಡಿರುವರು. ಇವರು ವಿದ್ವಾನ್ ಕೆ.ಎನ್. ಕೃಷ್ಣಮೂರ್ತಿ, ವಿದ್ವಾನ್ ಬಿ.ಸಿ. ಮಂಜುನಾಥ್, ವಿದ್ವಾನ್ ಕೆ.ವಿ. ಪ್ರಸಾದ್ ಮತ್ತು ವಿದ್ವಾನ್ ಆನೂರು ಅನಂತಕೃಷ್ಣ ಶರ್ಮ ಇವರುಗಳ ಬಳಿ ಶಿಷ್ಯವೃತ್ತಿ ಮಾಡಿದ್ದಾರೆ. ವಿದ್ವಾನ್ ಎನ್. ಅಮೃತ್ ಮತ್ತು ವಿದ್ವಾನ್ ಸನಕ ಕುಮಾರ್ ಆತ್ರೇಯವರ ಮಾರ್ಗದರ್ಶನವನ್ನೂ ಪಡೆದಿದ್ದಾರೆ. ಆಕಾಶವಾಣಿ, ದೂರದರ್ಶನದಲ್ಲಿ ಕೊನ್ನಕ್ಕೋಲ್ ವಾದನದಲ್ಲಿ "ಎ" ಶ್ರೇಣಿ ಪಡೆದಿರುವ ಕರ್ನಾಟಕದ ಮೊದಲ ಕಲಾವಿದರು. ಮೃದಂಗ ವಿದ್ವತ್ ಪರೀಕ್ಷೆಯಲ್ಲಿ ಮೊದಲನೆಯ ರ್‍ಯಾಂಕ್, ಕೇಂದ್ರ ಸರ್ಕಾರದ ಪ್ರತಿಭಾ ವಿದ್ಯಾರ್ಥಿವೇತನ, ಸಿಎಂಎಎನ್‌ಎ ಪ್ರಶಸ್ತಿ, ರಾಗಲಯಪ್ರಭ ಪ್ರಶಸ್ತಿ, ಅನನ್ಯ ಯುವ ಪುರಸ್ಕಾರ – ಇವರಿಗೆ ಲಭಿಸಿರುವ ವಿಶೇಷ ಸನ್ಮಾನಗಳು. ವಿಶ್ವ ಕೊನ್ನಕ್ಕೋಲ್ ಅಕ್ಯಾಡೆಮಿ ಸಂಸ್ಥೆಯ ಸ್ಥಾಪಕರು. ಲಯಲಾವಣ್ಯ ಬ್ಯಾಂಡ್ ತಂಡದ ಪ್ರಮುಖ ಸದಸ್ಯರಲ್ಲೊಬ್ಬರು.

# ಬೆಳದಿಂಗಳ ಸಂಗೀತ 271

## 18 ಸೆಪ್ಟೆಂಬರ್ 2024



### ಗಾಯನ

ವಿದುಷಿ ಪಾವನಿ ಭಾರದ್ವಾಜ್

### ವಯೊಲಿನ್

ವಿದ್ವಾನ್ ರೂಪನಗುಡಿ ರತ್ನತೇಜ





### ಮೃದಂಗ

ವಿದ್ವಾನ್ ಎಚ್.ಎಲ್. ಶಿವಶಂಕರಸ್ವಾಮಿ

### ಘಟಂ

ವಿದ್ವಾನ್ ಎಂ.ಎಸ್. ಜಯರಾಮ್



---

ಫೋನ್: 0821–2548221, 2548223 * ಇಮೇಲ್: sutturmath@jssonline.org